# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.

**OS No**.227/2015

**PW**:2

**ದಿನಾಂಕ 04.12.2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ.ಎಸ್.ಎಸ್.ಬಿ. ವಕೀಲರಿಂದ:**

ನನ್ನ ತಂದೆ ಹೆಸರು ಉಷ್ಮಾನ ಎಂದರೆ ಸರಿ. ಸದರಿ ನನ್ನ ತಂದೆ ಉಷ್ಮಾನ ಇವರಿಗೆ ರಸೂಲ ಎಂಬ ತಮ್ಮ ಇದ್ದನು ಎಂದರೆ ಸರಿ. ಉಷ್ಮಾನ ಮತ್ತು ರಸೂಲ ಇವರ ತಂದೆ ಮಹಮ್ಮದ. ಮಹಮ್ಮದನ ತಂದೆ ಮಲೀಕಸಾಹೇಬ. ಮಲೀಕಸಾಹೇಬಗೆ ಉಷ್ಮಾನಸಾಹೇಬ ಎಂಬ ತಮ್ಮ ಇದ್ದ ಎಂದರೆ ನನಗೆ ಗೊತ್ತಿಲ್ಲ. ಸದರಿ ಮಲೀಕಸಾಹೇಬ ಇತನ ತಂದೆ ಹೆಸರು ಲಾಡಲೇಸಾಬ ಎಂದರೆ ನನಗೆ ಗೊತ್ತಿಲ್ಲ. ಸದರಿ ಲಾಡಲೇಸಾಬ ಇವರಿಗೆ ಮಲ್ಲಿಕಸಾಬ ಮತ್ತು ಉಷ್ಮಾಣಸಾಬ ಎಂಬ ಇಬ್ಬರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಸದರಿ ಉಷ್ಮಾಣಸಾಬ ಇವರಿಗೆ ಮಕ್ತೂಮಲಾಡಲೇಸಾಬ ಮತ್ತು ಹುಸೇನ ಲಾಡ್ಲೇಸಾಬ ಎಂಬ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಮಕ್ತೂಮಲಾಡ್ಲೇಸಾಬ ಮತ್ತು ಹುಸೇನ ಲಾಡ್ಲೇಸಾಬ ಇವರು ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿಯು ಅವರು ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಲಾಡ್ಲೇಸಾಬ ಇವರಿಗೆ ಕಾಶೀಂಸಾಬ ಮತ್ತು ಸುಲೇಮಾನ ಎಂಬ ಇಬ್ಬರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಮೃತ 1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿಯನ್ನು ಯಾಕೆ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು ಮಾಡಿರುವುದಿಲ್ಲ ಅವರೇ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ. 3 ರಿಂದ 6 ಇವರು ನನ್ನ ಅಣ್ಣ ತಮ್ಮಂದಿರು. 7 ನೇ ಪ್ರತಿವಾದಿ ನನ್ನ ತಾಯಿ. 8 ನೇ ಪ್ರತಿವಾದಿ ನನ್ನ ಚಿಕ್ಕಪ್ಪನ ಮಗ. 9 ನೇ ಪ್ರತಿವಾದಿ ನನ್ನ ಚಿಕ್ಕಮ್ಮ. 10 ಮತ್ತು 11 ನೇ ಪ್ರತಿವಾದಿಯರು ನಮ್ಮ ಹೊಲವನ್ನು ಖರೀದಿಗೆ ಪಡೆದವರು. ಸದರಿ 10 ಮತ್ತು 11 ನೇ ಪ್ರತಿವಾದಿಯರು ನನ್ನ ಅಜ್ಜನಿಂದ ಹೊಲವನ್ನು ಖರೀದಿ ಮಾಡಿರುತ್ತಾರೆ. 12 ರಿಂದ 14 ನೇ ಪ್ರತಿವಾದಿಯರು ನಮ್ಮ ಹೊಲವನ್ನು ಖರೀದಿ ಮಾಡಿದ ಖರೀದಿದಾರರು ಇರುತ್ತಾರೆ. 10 ರಿಂದ 14 ನೇ ಪ್ರತಿವಾದಿಯರು ಯಾವ ಜಮೀನಿನ ಸರ್ವೆ ನಂಬರ ಆಸ್ತಿಯನ್ನು ಖರೀದಿಗೆ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ತಂದೆಯವರು ಬಳಿ ಖರೀದಿ ಪಡೆದುಕೊಂಡಿರುತ್ತಾರೆ ನನಗೆ ಅಷ್ಟೊಂದು ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ. 30 ರಲ್ಲಿ 22 ಎಕರೆ ಜಮೀನು ಇರುತ್ತದೆ. ಸದರಿ 22 ಎಕರೆಯಲ್ಲಿ 5 ಎಕರೆ ಬಿಟ್ಟು ಉಳಿದ ಎಲ್ಲ ಆಸ್ತಿಗಳನ್ನು ನನ್ನ ತಂದೆಯವರು ಮಾರಾಟ ಮಾಡಿರುತ್ತಾರೆ. ಸರ್ವೆ ನಂ. 55 ರ ಜಮೀನನ್ನು ನನ್ನ

ತಮ್ಮ ಹಮೀದ ಮತ್ತು ಸರ್ದಾರ ಇವರು ಮಾರಾಟ ಮಾಡಿರುತ್ತಾರೆ. ಸದರಿ ಸರ್ವೆ ನಂ. 55 ರಲ್ಲಿ ಈಗ 3 ಎಕರೆ ಉಳಿದಿರುತ್ತದೆ. ಸರ್ವೆ ನಂ. 1 ರಲ್ಲಿ ಎಷ್ಟು ಆಸ್ತಿಯನ್ನು ಮಾರಾಟ ಮಾಡಿದ್ದೀರಿ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಮನೆಯ ಅಡಚಣೆಯಿಂದ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ. ವಾಟ್ನಿ ಆದ ಬಳಿಕ ಅವರ ಪಾಲಿಗೆ ಆಸ್ತಿಯನ್ನು ಅವರವರು ಮಾರಾಟ ಮಾಡಿರುತ್ತಾರೆ. ನಾವು 6 ಜನ ಅಣ್ಣ ತಮ್ಮಂದಿರು. ನಮ್ಮ 5 ಜನ ಅಣ್ಣ ತಮ್ಮಂದಿರಿಗೆ ತಲಾ 1 ಎಕರೆ ಇನ್ನೊಬ್ಬ ಸಹೋದರನಿಗೆ 2 ಎಕರೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ. 30 ರಲ್ಲಿ ನಮ್ಮ 5 ಜನ ಅಣ್ಣ ತಮ್ಮಂದಿರರಿಗೆ ಪಾಲಾಗಿರುತ್ತದೆ. ಅಸಲು ದಾವಾ ನಂ. 120/1971 ರಂತೆ ಗುಡುಲಾಲ ಇತನ ವಿರುದ್ಧ 1 ನೇ ಪ್ರತಿವಾದಿ ಮತ್ತು ಸುಲೇಮಾನ ಇವರು ದಾವೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಈಗ 55-56 ವರ್ಷ ವಯಸ್ಸಾಗಿರಬಹುದು. 1971 ನೇ ಇಸವಿಯಲ್ಲಿ ನನಗೆ ಎಷ್ಟು ವಯಸ್ಸಾಗಿರಬಹುದು ಎಂದು ನಾನು ವಿದ್ಯಾಭ್ಯಾಸವನ್ನು ಮಾಡದೇ ಇಲ್ಲದ ಕಾರಣ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಎಫ್.ಡಿ.ಪಿ. ನಂ.1/2010 ನ್ನು ದಾಖಲಿಸಿರುತ್ತಾರೆ ಅದರಲ್ಲಿ ನಾನು ಕೂಡ ಪಕ್ಷಗಾರನಾಗಿರುತ್ತೇನೆ ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ಸುಲೇಮಾನ ಇವರು ಸಲ್ಲಿಸಿದ ದಾವಾ ನಂ.120/1971 ಇದು 1972 ನೇ ಇಸವಿಯಲ್ಲಿ ಡಿಕ್ರಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ದಾವೆಯನ್ನು ಯಾರು ದಾವೆಯನ್ನು ಮಾಡಿದ್ದರೋ ಅವರಿಗೂ ನಮಗೂ ಸಂಬಂಧ ಇಲ್ಲ ಆದ ಕಾರಣ ಆ ದಾವೆ ರದ್ದಾಗಬೇಕೆಂದು ಮಾಡಿರುತ್ತೇನೆ. ಅವರು ನಮಗೆ ಸಂಬಂಧಿಕರಿದ್ದರೂ ಮತ್ತು ಖೊಟ್ಟಿ ಆದೇಶವನ್ನು ತೆಗೆದುಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಅವರು ಕಾಕಾಗಳು ಇದ್ದರು ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.